**SPL.C .5330/2024**

ಪ್ರಾ.ಸಾ **:4** ಪ್ರಾ.ಸಾ **:2**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು **(** ಸಂಚಾರಿ ಪೀಠ ಲಿಂಗಸ್ಗೂರು**)**

| | | |
|---|---|---|
| ಸಾಕ್ಷಿಯ ಹೆಸರು | : | ಸತ್ಯನಾರಾಯಣ |
| ತಂದೆ ಹೆಸರು | : | ಮಾನಪ್ಪ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ತಾಂತ್ರಿಕ ಸಹಾಯಕರು |
| ವಿಳಾಸ | : | ಸಿಂಧನೂರು |

ಸಾಕ್ಷಿಗೆ ದಿನಾಂಕ **06-12-2025** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಮುಖ್ಯವಿಚಾರಣೆ **:** ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ **:**

ದಿನಾಂಕ 21-01-2019 ರಂದು ನಾನು ಲಿಂಗಸಗೂರಿನ ತಾಲೂಕಾ ಪಂಚಾಯಿತಿಯಲ್ಲಿ ತಾಂತ್ರಿಕ ಸಹಾಯ ಎಂದು ಕಾರ್ಯ ನಿರ್ವಹಿಸಿರುತ್ತೇನೆ.

2. ನ್ಯಾಯಾಲಯದ ಮುಂದಿರುವ ಆರೋಪಿ ಸಹ ನನ್ನೊಂದಿಗೆ ಲಿಂಗಸುಗೂರಿನ ತಾಲೂಕಾ ಪಂಚಾಯಿತಿಯಲ್ಲಿ ತಾಂತ್ರಿಕ ಸಹಾಯಕ ಎಂದು ಕೆಲಸ ಮಾಡುತ್ತಿದ್ದನು.

3. ನಾನು ಲಿಂಗಸುಗೂರಿನಲ್ಲಿ ಕೆಲಸ ಮಾಡುತ್ತಿದ್ದಾಗ, ಲಿಂಗಸಗೂರಿನ ಒಂದು ಮನೆಯಲ್ಲಿ ಬಾಡಿಗೆಯಿಂದ ವಾಸವಿದ್ದೇನು. ಅರುಣ ಕುಮಾರ್ ಮತ್ತು ರವಿ ಕಿರಣ ಎಂಬುವರರು ನನ್ನೊಂದಿಗೆ ಆ ಮನೆಯಲ್ಲಿ ವಾಸವಿದ್ದರು. ಆರೋಪಿ ನಾನು ವಾಸವಿದ್ದ ಮನೆಯಲ್ಲಿ ವಾಸ ಇರಲಿಲ್ಲ.

4. ದಿನಾಂಕ 21-01-2019 ರಂದು ಪೊಲೀಸರು ನಾನು ವಾಸವಿದ್ದ ಮನೆಗೆ ಬಂದಿದ್ದರು. ಆ ಸಮದಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ನಾನು ವಾಸವಿದ್ದ ಮನೆಯಲ್ಲಿದ್ದನು. ಸಾಕ್ಷಿಯನ್ನು ಆ ದಿನ ಪೊಲೀಸರು ನೀನಿದ್ದ ಮನೆಯಲ್ಲಿ ಪಂಚನಾಮೆ ಮಾಡಿದ್ದಾರೋ ಅಥವಾ ಇಲ್ಲವೋ ಎಂದು ಪ್ರಶ್ನೆ ಮಾಡಿದಾಗ, ನಾನು ಒಳಗಡೆ ಇದ್ದೆನು, ಬಾಗಿಲನ್ನು ಕ್ಲೋಸ್ ಮಾಡಲಾಗಿತ್ತು, ಕಾರಣ ಹೊರಗಡೆ ಏನಾಗಿತ್ತು ಎಂಬುದು ಗೊತ್ತಾಗಿಲ್ಲ ಎಂದು ಸಾಕ್ಷಿ ಉತ್ತರಿಸಿದ್ದಾರೆ. ನಾನು ಆ ದಿನ ನಾನಿದ್ದ ಮನೆಯಲ್ಲಿ ಪಂಚನಾಮೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿ ಆ ಸಹಿ ನಿ.ಪಿ.12 ರಲ್ಲಿದೆ ಎಂದು ಗುರುತಿಸಿದ್ದಾರೆ. ಸಾಕ್ಷಿ ಗುರುತಿಸಿದ

ಸಹಿಯನ್ನು ನಿ.ಪಿ.12(ಹೆಚ್.) ಎಂದು ಗುರುತಿಸಲಾಯಿತು.

5. ಆ ದಿನ ನನ್ನ ಮನೆಯಲ್ಲಿ ಪೊಲೀಸರು ಸಿ.ಡಿ.ಯನ್ನು ಪ್ಲೇ ಮಾಡಿ ತೋರಿಸಿದ್ದಾರೆ. ಆ ಸಿ.ಡಿ.ಯಲ್ಲಿ ಇರುವಂತಹ ಸಂಭಾಷಣೆಯನ್ನು ಮಾಡಿದ ವ್ಯಕ್ತಿಗಳ ಧ್ವನಿಗಳನ್ನು ನನಗೆ ಗುರುತಿಸಲು ಆಗಿರುವುದಿಲ್ಲ. ಈಗ ತೋರಿಸುತ್ತಿರುವ ಸಿ.ಡಿ. ಮತ್ತು ಲಕೋಟೆಯನ್ನು ನಾನು ಪಂಚನಾಮೆಗೆ ಸಹಿ ಮಾಡಿದ ದಿನದಂದು ನೋಡಿರುತ್ತೇನೆ.

6. ಸಾಕ್ಷಿಗೆ ಮೇಲೆ ಹೇಳಿದ ಸಿ.ಡಿ.ಯನ್ನು ಲ್ಯಾಫ್ ಟಾಪ್‌ದಲ್ಲಿ ಹಾಕಿ ಪ್ಲೇ ಮಾ ಡಲು ಹೋದಾಗ, ಸಿ.ಡಿ. ಪ್ಲೇ ಆಗಿರುವುದಿಲ್ಲ.

(ಸಿ.ಡಿ.ಯಲ್ಲಿ ತಾಂತ್ರಿಕ ದೋಷವಿದ್ದರೆ, ಅದನ್ನು ಪ್ಲೇ ಮಾಡಿ ತೋರಿಸಲು ಅವಕಾಶ ಇಟ್ಟು ಸಾಕ್ಷಿಯ ಮುಂದಿನ ಹೇಳಿಕೆಯನ್ನು ಬರೆದುಕೊಳ್ಳಲಾಗಿದೆ.)

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

7. ನನಗೆ ತೋರಿಸಿದ ಸಿ.ಡಿ. ಯ ಮೇಲೆ ನನ್ನ ಸಹಿಗಳು ಇರುವುದಿಲ್ಲ. ನಾನು ಆ ದಿನ ನೋಡಿದ ಸಿ.ಡಿ. ಈಗ ನ್ಯಾಯಾಲಯದಲ್ಲಿ ಇರುವ ಸಿ.ಡಿ. ಆಗಿದೆ ಎಂದು ಹೇಳಲು ಬರುವುದಿಲ್ಲ ಅಂದರೆ ಸರಿ.

8. ನಾನು ಬಾಡಿಗೆಯಿಂದ ವಾಸವಿದ್ದ ಮನೆಯ ನಂಬರ್ ನೆನಪಿರುವುದಿಲ್ಲ. ಆ ಮನೆಯ ಮಾಲೀಕರ ಹೆಸರು ನೆನಪಿರುವುದಿಲ್ಲ. ನನಗೆ ಆ ಮನೆಯ ಚಕ್ಕಂದಿಗಳನ್ನು ಹೇಳಲು ಬರುವುದಿಲ್ಲ. ಆ ಮನೆಯ ಬಾಗಿಲು ದಕ್ಷಿಣ ಮುಖವಾಗಿತ್ತು. ಆ ಮನೆಯಲ್ಲಿ ಮೂರು ಕೋಣೆಗಳು ಇದ್ದವು. ನಾನಿದ್ದಾಗ, ಸುಮಾರು 7-8 ಜನರು ಮನೆಗೆ ಬಂದಿದ್ದರು. ಅವರು ಪೊಲೀಸ್ ಸಮವಸ್ತ್ರದಲ್ಲಿರಲಿಲ್ಲ. ಅವರು ಎ.ಸಿ.ಬಿ., ಎಂದು ಹೇಳಿದ್ದರು. ಅವರು ನಾನು ಇದ್ದ ಕೋಣೆಯ ಬಾಗಿಲನ್ನು ಲಾಕ್ ಮಾಡಿದ್ದರು. ನನ್ನ ಸಹಿಯನ್ನು ಪಂಚನಾಮೆಯಲ್ಲಿ ನನ್ನ ಕಛೇರಿಯಲ್ಲಿ ಪಡೆದಿದ್ದಾರೆ. ನಾನು ಸಹಿ ಮಾಡಿದ ಪಂಚನಾಮೆಯಲ್ಲಿ ಏನು ಬರೆಯಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ ಅಂದರೆ ಸರಿ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು ( ಸಂಚಾರಿ ಪೀಠ ಲಿಂಗಸೂಗೂರು)